ಬಂದಿತು. ನಂತರ ಒಂದೆರಡು ಸಿನಿಮಾಗಳಲ್ಲಿ ಕಾಣಿಸಿಕೊಂಡೆ. ಸದ್ಯಕ್ಕೆ 'ಕೃಷ್ಣಂ ಪ್ರಣಯ ಸಖಿ' ಬಿಡುಗಡೆಗೆ ಎದುರು ನೋಡುತ್ತಿದ್ದೇನೆ.

**◆ ಎಂಜಿನಿಯರಿಂಗ್ ಮಾಡಿದ ನಿಮ್ಮಲ್ಲಿ ಸಿನಿಮಾ ಸೆಳೆತ ಮೂಡಿದ್ದು ಹೇಗೆ?**

16 ವರ್ಷವಿದ್ದಾಗಲೇ ಮಾಡೆಲಿಂಗ್ ಆರಂಭಿಸಿ, ಎಂಜಿನಿಯರಿಂಗ್‌ಗೆ ಬರುವಷ್ಟರಲ್ಲಿ ನಟನಾ ಕ್ಷೇತ್ರಕ್ಕೆ ಬಂದಿದ್ದೆ. ಎಂಜಿನಿಯರಿಂಗ್‌ನಲ್ಲಿ ಡಿಸ್ಟಿಂಕ್ಷನ್‌ನಲ್ಲಿ ಪಾಸಾಗಿದ್ದೆ. ಒಳ್ಳೆಯ ಕಂಪನಿಯಲ್ಲಿ ಕೆಲಸ ಸಿಕ್ಕಿತ್ತು ಕೂಡ. ಆದರೆ ನನ್ನೊಳಗೆ ನಟನೆಯೆಡೆಗಿದ್ದ ಪ್ಯಾಷನ್ ಅವೆಲ್ಲವನ್ನೂ ಬಿಟ್ಟು ಈ ಕಡೆಗೆ ಬರುವಂತೆ ಪ್ರೇರೇಪಿಸಿತು. ನಟನೆಯನ್ನು ಒಲಿಸಿಕೊಳ್ಳಲೆಂದೇ ಆತ್ಮವಿಶ್ವಾಸದಿಂದ ಇಲ್ಲಿಗೆ ಬಂದೆ.

**◆ ನಿಮ್ಮ ಪ್ರಕಾರ ಸಿನಿಮಾರಂಗಕ್ಕೆ ಬರುವ ಹೊಸಬರಿಗೆ ಯಾವ ಸವಾಲು ಎದುರಾಗಬಹುದು?**

ಮೊದಲನೆಯದಾಗಿ, ಸಿನಿಮಾರಂಗ ನಾವಂದುಕೊಂಡಂತೆ ಇರುವುದಿಲ್ಲ. ಇಲ್ಲಿ ಅನಿಶ್ಚಿತತೆ ಕಾಯಂ. ಅದನ್ನು ಪ್ರಜ್ಞೆಯಲ್ಲಿಟ್ಟುಕೊಂಡೇ ನಡೆಯಬೇಕು. ಅದಕ್ಕೆ ತಕ್ಕ ಉತ್ತರವನ್ನು ಸಮಾಜಕ್ಕೆ ಕೊಡಬೇಕು. ಎರಡನೆಯದಾಗಿ, ಈ ಕ್ಷೇತ್ರದಲ್ಲಿ ನಮ್ಮನ್ನು ನಾವು ಇಂತಿಷ್ಟು ವರ್ಷಗಳಲ್ಲಿ ಗುರುತಿಸಿಕೊಳ್ಳದೇ ಹೋದರೆ, ಅದಕ್ಕೆ ತಕ್ಕ ಅವಕಾಶಗಳು ಸಿಗದೇ ಹೋದರೆ ಮೂಲೆಗುಂಪಾಗುವ ಸಾಧ್ಯತೆ ಹೆಚ್ಚು. ಮೂರನೆಯದಾಗಿ, ಪ್ರಾಜೆಕ್ಟ್‌ಗಳ ಆಯ್ಕೆಯಲ್ಲಿ ಎಚ್ಚರವಿರಬೇಕು. ಯಾರನ್ನು ನಂಬುವುದು ಎಂದು ತಿಳಿಯುವುದಿಲ್ಲ. ಫೇಕ್ ಕಾಲ್, ಸೂಕ್ತವಲ್ಲದ ಪ್ರಾಜೆಕ್ಟ್ ಇವೆಲ್ಲದರ ನಡುವಿನ ಆಯ್ಕೆ ದೊಡ್ಡ ಸವಾಲು.

**◆ ಯಾವ ಪಾತ್ರಗಳಲ್ಲಿ ನಿಮ್ಮನ್ನು ನೋಡಿಕೊಳ್ಳಲು ಇಷ್ಟಪಡುತ್ತೀರಿ?**

ಶರಣ್ಯ ಎಂದರೆ ಗ್ಲಾಮರಸ್ ರೋಲ್ ಮಾಡುತ್ತಾಳೆ ಎಂದು ಸೀಮಿತವಾಗುವುದು ನನಗೆ ಬೇಕಿಲ್ಲ. ನನಗೆ ಗ್ಲಾಮರ್ ಮಾಡೋಕೂ ಇಷ್ಟ. ಡಿ–ಗ್ಲಾಮ್ ಪಾತ್ರಗಳೂ ಇಷ್ಟ. ಹಳ್ಳಿ ಹುಡುಗಿಯಾಗಬೇಕು, ಬಜಾರಿಯಾಗಬೇಕು, ಮುಗ್ಧೆಯಾಗಬೇಕು, ಪ್ರಬುದ್ಧ ಹುಡುಗಿಯಾಗಬೇಕು... ಹೀಗೆ ಒಂದು ಪಾತ್ರಕ್ಕಿಂತ ಮತ್ತೊಂದು ಪಾತ್ರ ಬೇರೆಯದೇ ಆಗಿರಬೇಕು. ಜನರಿಗೆ ಅಚ್ಚರಿ ನೀಡಬೇಕು. ಅಂಥ ವರ್ಸಟಾಲಿಟಿಯನ್ನು ನಾನು ಇಷ್ಟಪಡುತ್ತೇನೆ. ■



# ಅಮೂಲ್ಯ
## ಹೊಸ ಸಮಯ

ಕನ್ನಡ ಚಿತ್ರರಂಗದಿಂದ ಸುಮಾರು ಏಳು ವರ್ಷ ಗ್ಯಾಪ್ ತೆಗೆದುಕೊಂಡಿದ್ದ ನಟಿ ಅಮೂಲ್ಯ, ನಟನೆಯತ್ತ ಮರಳಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಇದಕ್ಕೆ ಪೂರ್ವಭಾವಿಯಾಗಿ ಫಿಟ್ನೆಸ್ ವ್ಯಾಯಾಮಗಳನ್ನು ಆರಂಭಿಸಿದ್ದಾರೆ.

2017ರಲ್ಲಿ 'ಮುಗುಳುನಗೆ' ಸಿನಿಮಾದಲ್ಲಿ ಕೊನೆಯದಾಗಿ ಕಾಣಿಸಿಕೊಂಡಿದ್ದ ಅಮೂಲ್ಯ, ಅವಳಿ ಮಕ್ಕಳಿಗೆ ಜನ್ಮ ನೀಡಿದ ನಂತರ ಹಲವು ವರ್ಷ ಬ್ರೇಕ್ ತೆಗೆದುಕೊಂಡಿದ್ದರು. ಇದೀಗ ಹಳೇ ಉತ್ಸಾಹದಲ್ಲೇ ಹಿಂದಿರುಗುವುದಾಗಿ ತಿಳಿಸಿದ್ದಾರೆ.

'ನಾನು ನನ್ನ ಆರನೇ ವಯಸ್ಸಿಗೆ ನಟನೆ ಆರಂಭಿಸಿದೆ. ಚಿಕ್ಕ ವಯಸ್ಸಿಗೇ ಸಿನಿಮಾಲೋಕ ಸ್ವಾಗತಿಸಿತ್ತು. ನಟನೆಯ ಬಗ್ಗೆ ಏನೂ ತಿಳಿಯದ ಸಮಯದಲ್ಲಿ, ನಟಿಯಾಗಬೇಕೆಂಬ ಆಲೋಚನೆ ಹುಟ್ಟುವ ಮುನ್ನವೇ ಅವಕಾಶಗಳು ಸಿಕ್ಕಿದ್ದವು. ಆದರಿಂದು ಆ ನಟನೆಯಿಂದಲೇ ನನಗೆ ಒಂದು ಗುರುತು ಸಿಕ್ಕಿದೆ. ಸಿನಿಮಾ, ನಟನೆ ಹೊರತು ನನಗೆ ಏನೂ ತಿಳಿದಿಲ್ಲ ಕೂಡ. ಕೊನೆಯವರೆಗೂ ಸಿನಿಮಾದ ಭಾಗವಾಗಿರಲು ಇಷ್ಟಪಡುತ್ತೇನೆ' ಎಂದು ಮತ್ತೆ ಸಿನಿಮಾರಂಗಕ್ಕೆ ಬರುತ್ತಿರುವ ಸೂಚನೆ ನೀಡಿದ್ದಾರೆ.

'ತುಂಬಾ ಬೇಗ ಸಿನಿಮಾ ಕ್ಷೇತ್ರಕ್ಕೆ ಬಂದೆ. ಜೊತೆಗೆ ಒಂದಾದ ನಂತರ ಒಂದರಂತೆ ಸಿನಿಮಾಗಳಲ್ಲಿ ತೊಡಗಿಕೊಂಡೆ. ಸರಿಯಾಗಿ ಬ್ರೇಕ್ ಕೂಡ ತೆಗೆದುಕೊಂಡಿರಲಿಲ್ಲ. ಹೀಗಾಗಿ ಈ ಬ್ರೇಕ್ ಅನ್ನು ದೇಶ ವಿದೇಶ ಸುತ್ತಲು ಬಳಸಿಕೊಂಡೆ. ಸಾಕಷ್ಟು ಸ್ಥಳಗಳಿಗೆ ಹೋಗಿ ಬಂದೆ. ಹಾಗೇ ನನ್ನ ಮಕ್ಕಳ ಬೆಳವಣಿಗೆಯನ್ನೂ ಎಂಜಾಯ್ ಮಾಡಿದೆ. ಈಗ ಸಿನಿಮಾಗೆ ಬರಲು ತಯಾರಾಗುತ್ತಿದ್ದೇನೆ. ಸ್ಕ್ರಿಪ್ಟ್ ಓದಿ ಒಪ್ಪಲು ನನ್ನದೇ ಸಮಯ ತೆಗೆದುಕೊಳ್ಳುತ್ತಿದ್ದೇನೆ. ಹೊಸ ವರ್ಷದಿಂದ ಫಿಟ್ನೆಸ್ ಕಡೆಗೂ ಸಾಕಷ್ಟು ಗಮನ ನೀಡುತ್ತಿದ್ದೇನೆ' ಎಂದು ಖುಷಿಯಿಂದ ಹೇಳಿಕೊಂಡಿದ್ದಾರೆ. ■

# ಮತ್ತೆ ರಂಗಿತರಂಗ ಕಾಂಬೊ

ಕನ್ನಡ ಚಿತ್ರರಂಗದಲ್ಲಿ ಹೊಸತನದ ಥ್ರಿಲ್ಲರ್ ಕಥನವೆಂದು ಕರೆಸಿಕೊಂಡ 'ರಂಗಿತರಂಗ'ದ ಜೋಡಿ ಮತ್ತೆ ತೆರೆ ಮೇಲೆ ಕಾಣಿಸಿಕೊಳ್ಳುತ್ತಿದೆ. ಸಿನಿಮಾದಲ್ಲಿ ನಾಯಕನಾಗಿದ್ದ ನಿರೂಪ್ ಭಂಡಾರಿ ಹಾಗೂ ಖಳನಾಯಕನಾಗಿ ಅಬ್ಬರಿಸಿದ್ದ ಸಾಯಿಕುಮಾರ್ ಮತ್ತೆ ಹೊಸ ಸಿನಿಮಾಗೆ ಕೈ ಜೋಡಿಸಿದ್ದಾರೆ.

ಮೊದಲ ಬಾರಿಗೆ ನಿರ್ದೇಶನದ ಅಖಾಡಕ್ಕೆ ಇಳಿದಿರುವ ಸಚಿನ್ ವಾಲಿ ಸಾರಥ್ಯದ ಹೊಸ ಸಿನಿಮಾದಲ್ಲಿ ನಿರೂಪ್ ಭಂಡಾರಿ ಹಾಗೂ ಸಾಯಿಕುಮಾರ್ ಒಟ್ಟಿಗೆ ನಟಿಸುತ್ತಿದ್ದಾರೆ. ಬಹಳ ವರ್ಷಗಳ ನಂತರ ಈ ಕಾಂಬೊ ಮತ್ತೆ ಒಂದಾಗುತ್ತಿರುವುದರಿಂದ ಸಿನಿಪ್ರೇಮಿಗಳಲ್ಲಿ ಕುತೂಹಲವೂ ಹೆಚ್ಚಾಗಿದೆ. ಈ ಸಿನಿಮಾದಲ್ಲಿ ಸಾಯಿಕುಮಾರ್, ನಿರೂಪ್ ತಂದೆ ಪಾತ್ರಕ್ಕೆ ಬಣ್ಣ ಹಚ್ಚಲಿದ್ದಾರೆ.

ಸತ್ಯ ಮತ್ತು ಸುಳ್ಳಿನ ನಡುವೆ ಇರುವ ಸಾಮಾಜಿಕ ಬದ್ಧತೆ ಸುತ್ತ ಸಾಗುವ ಕಾಮಿಡಿ ಮತ್ತು ಫ್ಯಾಮಿಲಿ ಎಂಟರ್‌ಟೈನರ್ ಕಥಾಹಂದರದ ಸಿನಿಮಾ ಇದಾಗಿರುವುದಾಗಿ ಚಿತ್ರತಂಡ ಹೇಳಿಕೊಂಡಿದೆ. ಸದ್ಯ ಸಿನಿಮಾ ಚಿತ್ರೀಕರಣ ಭರದಿಂದ ಸಾಗಿದೆ. ■